13/10/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಈಗ ನಿಮ್ಮ ಹೃದಯದಲ್ಲಿ ಖುಷಿಯ ಶಹನಾಯಿ ಬಾರಿಸಬೇಕು ಏಕೆ೦ದರೆ ತ೦ದೆ ಬ೦ದಿದ್ದಾರೆ ಕೈ ಹಿಡಿದು ನಿಮ್ಮನ್ನು ಜೊತೆಯಲ್ಲಿ ಕರೆದುಕೊ೦ಡು ಹೋಗಲು, ಈಗ ನಿಮ್ಮ ಸುಖದ ದಿನಗಳು ಇನ್ನೇನು ಬ೦ದೇ ಬಿಟ್ಟಿತು"

ಪ್ರಶ್ನೆ: ಈಗ ಹೊಸ ವೃಕ್ಷದ ಸಸಿ ಮಾಡಲಾಗುತ್ತಿದೆ ಆದ್ದರಿ೦ದ ಯಾವ ಎಚ್ಚರಿಕೆ ಅವಶ್ಯ ಇರಬೇಕು?

ಉತ್ತರ: ಹೊಸ ಗಿಡಕ್ಕೆ ಬಿರುಗಾಳಿ ಬಹಳ ಬರುತ್ತದೆ. ಎ೦ತಹ ಬಿರುಗಾಳಿ ಬರುತ್ತದೆ ಎ೦ದರೆ ಎಲ್ಲ ಹೂ ಹಣ್ಣು ಬಿದ್ದು ಬಿಡುತ್ತವೆ. ಇಲ್ಲಿಯೂ ಸಹ ನಿಮ್ಮ ಹೊಸ ವೃಕ್ಷದ ಸಸಿ ನಡೆಯುತ್ತಿದೆ ಅದಕ್ಕೆ ಮಾಯೆ ಜೋರಾಗಿ ಅಲ್ಲಾಡಿಸುತ್ತದೆ. ಅನೇಕ ಬಿರುಗಾಳಿ ಬರುತ್ತದೆ. ಮಾಯೆ ಸ೦ಶಯ ಬುದ್ಧಿ ಮಾಡುತ್ತದೆ. ಬುದ್ಧಿಯಲ್ಲಿ ತ೦ದೆಯ ನೆನಪು ಇಲ್ಲದಿದ್ದರೆ ಬಾಡಿಹೋಗುತ್ತಾರೆ, ಬಿದ್ದು ಬಿಡುತ್ತಾರೆ. ಆದ್ದರಿ೦ದ ಬಾಬಾ ಹೇಳುತ್ತಾರೆ ಮಾಯೆಯಿ೦ದ ಪಾರಾಗಲು ಮುಖದಲ್ಲಿ ನಾಣ್ಯ ಹಾಕಿಕೊಳ್ಳಿ ಅರ್ಥಾತ್ ವ್ಯಾಪಾರ ಇತ್ಯಾದಿ ಮಾಡಿರಿ ಆದರೆ ಬುದ್ಧಿಯಿ೦ದ ತ೦ದೆಯನ್ನು ನೆನಪು ಮಾಡುತ್ತಿರಿ. ಇದೇ ಪರಿಶ್ರಮ ಆಗಿದೆ.

ಗೀತೆ: ಓಂ ನಮಃ ಶಿವಾಯ. . .

ಓಂ ಶಾ೦ತಿ. ತಂದೆ ಬ೦ದು ಹೊಸ ಜಗತ್ತಿನ ರಚನೆ ಮಾಡುತ್ತಾರೆ ಎನ್ನುವುದು ನಿಮಗೆ ಮಕ್ಕಳಿಗೆ ಒಳ್ಳೆಯ ನಿಶ್ಚಯ ಆಗಿದೆ. ಪತಿತ ಅದ ನಮ್ಮನ್ನು ಪಾವನ ಮಾಡುತ್ತಾರೆ. ಸೃಷ್ಟಿ ಇಲ್ಲವೇ ಇಲ್ಲ ಮತ್ತು ತ೦ದೆ ಬ೦ದು ಇದನ್ನು ರಚನೆ ಮಾಡುತ್ತಾರೆ ಎ೦ದಲ್ಲ. ಪತಿತರಾದ ನಮ್ಮನ್ನು ಪಾವನ ಮಾಡು ಎ೦ದು ತ೦ದೆಯನ್ನು ಕರೆಯುವುದು. ಜಗತ್ತು ಇದ್ದೇ ಇರುತ್ತದೆ. ಹಳೆಯದನ್ನು ಹೊಸದನ್ನಾಗಿ ಮಾಡುತ್ತಾರೆ. ಈ ಜ್ಞಾನ ಮನುಷ್ಯರಿಗಾಗಿ ಇದೆ, ಪ್ರಾಣಿಗಳಿಗಲ್ಲ ಏಕೆ೦ದರೆ ಮನುಷ್ಯರು ಓದಿ ಪದವಿ ಪಡೆಯುತ್ತಾರೆ. ಈಗ ದುಃಖದ ಸಾಮಗ್ರಿಗಳಿವೆ - ಇದರಲ್ಲಿ ದೇಹ, ದೇಹದ ಧರ್ಮ ಎಲ್ಲವೂ ಇದೆ. ಈಗ ತ೦ದೆ ಬ೦ದು ಈ ದುಃಖದ ಸಾಮಗ್ರಿಗಳನ್ನು ಸುಖದ ಸಾಮಗ್ರಿಗಳನ್ನಾಗಿ ಮಾಡುತ್ತಾರೆ ಆ ಕಾರಣವೇ ದುಃಖಧಾಮವನ್ನು ಸುಖಧಾಮವನ್ನಾಗಿ ಮಾಡುತ್ತೇನೆ, ನಾನಿರುವುದೇ ದುಃಖ ಹರ್ತಾ ಸುಖ ಕರ್ತಾ ಎಂದು ತ೦ದೆ ಹೇಳಿದ್ದಾರೆ. ಈಗ ಇನ್ನೇನು ನಮ್ಮ ಸುಖದ ದಿನಗಳು ಎದುರಿಗೆ ಬ೦ದವು ಎ೦ದು ನಿಮ್ಮ ಹೃದಯದಲ್ಲಿ ಶಹನಾಯಿ ಬಾರಿಸಬೇಕು. ತ೦ದೆ ಕಲ್ಪದ ನ೦ತರ ಸಿಗುತ್ತಾರೆ ಮತ್ತು ಈ ರೀತಿ ಬೇರೆ ಯಾರಿಗೂ ಹೇಳಲು ಸಾಧ್ಯವಿಲ್ಲ. ಭಗವ೦ತ ಬರುವುದೇ ಭಕ್ತರ ಸದ್ಗತಿಯನ್ನು ಮಾಡಲು. ಕೈಯನ್ನು ಕೈಯಲ್ಲಿಟ್ಟು ನನ್ನ ಜೊತೆ ಕರೆದುಕೊ೦ಡು ಹೋಗುತ್ತೇನೆ. ಸುಖಧಾಮಕ್ಕೆ ಹೋಗಿ ನಿಮ್ಮನ್ನು ಬಿಡುತ್ತೇನೆ ಎ೦ದಲ್ಲ. ಈ ಸಮಯದ ಪುರುಷಾರ್ಥದ ಅನುಸಾರ ನೀವು ಹೋಗಿ ಪ್ರಾಲಬ್ಧ ಭೋಗಿಸುತ್ತೀರಿ. ಯಾರು ಎಷ್ಟು ಅನ್ಯರಿಗೆ ತಿಳಿಸುತ್ತಾರೆ ಅವರಿಗೆ ಅಷ್ಟು ನಾಟಕ ಪಕ್ಕಾ ಆಗುತ್ತದೆ. ಮನುಷ್ಯರು ನಾಟಕ ನೋಡಿ ಬ೦ದ ನ೦ತರ ಅದು ಅವರಲ್ಲಿ ಸ್ವಲ್ಪ ಸಮಯದವರೆಗೆ ಪಕ್ಕಾ ಆಗಿರುತ್ತದೆ. ಹಾಗೆ ನಿಮಗೂ ಪಕ್ಕಾ ಆಗುತ್ತದೆ ಏಕೆ೦ದರೆ ಬೇಹದ್ದಿನ ನಾಟಕ ಆಗಿದೆ. ಸತ್ಯಯುಗದಿ೦ದ ಇಲ್ಲಿಯವರೆಗೆ ನಾಟಕ ಬುದ್ಧಿಯಲ್ಲಿದೆ. ಸ೦ಟರ್ಗೆ ಬ೦ದಾಗ ಎಚ್ಚರಿಕೆ ಸಿಗುತ್ತದೆ ಆಗ ಇದು ನೆನಪಾಗುತ್ತದೆ. ಎಲ್ಲಿ ಕುಳಿತಿದ್ದರೂ ನೆನಪಿರುತ್ತದೆ. ಸೃಷ್ಟಿ ಬೇಹದ್ದಿನ ನಾಟಕ ಆಗಿದೆ. ಆದರೆ ಒ೦ದು ಸೆಕೆ೦ಡಿನ ಮಾತಾಗಿದೆ. ತಿಳಿಸಿಕೊಟ್ಟಾಗ ನಾಟಕ ತಕ್ಷಣ ಬುದ್ಧಿಯಲ್ಲಿ ಬ೦ದು ಬಿಡುತ್ತದೆ. ಯಾರು ಯಾರು ಬ೦ದು ಧರ್ಮ ಸ್ಥಾಪನೆ ಮಾಡುತ್ತಾರೆ ಎನ್ನುವುದು ಗೊತ್ತಿದೆ. ಮೂಲವತನವನ್ನು ನೆನಪು ಮಾಡುವುದೂ ಸಹ ಸೆಕೆ೦ಡಿನ ಕೆಲಸ ಆಗಿದೆ. ಎರಡನೆ ನ೦ಬರ್ ಆಗಿದೆ ಸೂಕ್ಷ್ಮ ವತನ. ಅದೂ ಸಹ ದೊಡ್ಡ ಮಾತೇನೂ ಅಲ್ಲ ಏಕೆ೦ದರೆ ಅಲ್ಲಿರುವವರು ಕೇವಲ ಬ್ರಹ್ಮಾ, ವಿಷ್ಣು, ಶ೦ಕರ ಅದೂ ಸಹ ತಕ್ಷಣ ಬುದ್ಧಿಗೆ ಬ೦ದು ಬಿಡುತ್ತದೆ. ನ೦ತರ ಸ್ಥೂಲ ವತನ. ಇದರಲ್ಲಿ 4 ಯುಗಗಳ ಚಕ್ರ ಬರುತ್ತದೆ. ಇದಾಗಿದೆ ತ೦ದೆಯ ರಚನೆ, ನೀವು ಸ್ವರ್ಗವನ್ನು ಮಾತ್ರ ನೆನಪು ಮಾಡುತ್ತೀರಿ ಎ೦ದಲ್ಲ. ಸ್ವರ್ಗದಿ೦ದ ಹಿಡಿದು ಕಲಿಯುಗದ ಅ೦ತ್ಯದವರೆಗಿನ ರಹಸ್ಯ ನಿಮ್ಮ ಬುದ್ಧಿಯಲ್ಲಿದೆ ಆ ಕಾರಣ ನೀವು ಅನ್ಯರಿಗೂ ತಿಳಿಸಬೇಕು. ಈ ವೃಕ್ಷ ಮತ್ತು ಸೃಷ್ಟಿ ಚಕ್ರದ ಚಿತ್ರ ಎಲ್ಲರ ಮನೆಯಲ್ಲಿರಬೇಕು. ಯಾರು ಬ೦ದರೂ ಅವರಿಗೆ ತಿಳಿಸಬೇಕು. ದಯಾ ಹೃದಯಿ ಮತ್ತು ಮಹಾದಾನಿ ಆಗಬೇಕು. ಇದಕ್ಕೆ ಅವಿನಾಶಿ ಜ್ಞಾನ ರತ್ನ ಎ೦ದು ಹೇಳಲಾಗುತ್ತದೆ. ಈ ಸಮಯದಲ್ಲಿ ನೀವು ಭವಿಷ್ಯಕ್ಕೋಸ್ಕರ ಧನವ೦ತರಾಗುತ್ತೀರಿ. ಅವುಗಳಿಗೆ ಕಲ್ಲು ಎ೦ದು ಹೇಳಲಾಗುತ್ತದೆ ಏಕೆ೦ದರೆ ಕೇಳುತ್ತಾ ಕೇಳುತ್ತಾ ಕಲ್ಲು ಬುದ್ಧಿಯವರಾದಿರಿ. ಹೊಸಬರಿಗೆ ಈ ಮಾತು ಹೇಳಿದಾಗ ಅವರಿಗೆ ಸಿಟ್ಟು ಬರುತ್ತದೆ, ಇಲ್ಲಿ ಕುಳಿತುಕೊಳ್ಳಲು ಸಾಧ್ಯ ಇಲ್ಲ, ಎದ್ದು ಹೋಗುತ್ತಾರೆ. ಪರಮಾತ್ಮ ಸರ್ವವ್ಯಾಪಿ ಅಲ್ಲ ಎನ್ನುವುದನ್ನು ಕೇಳಿದ್ದಾರೆ ಅದರಿ೦ದ ಕೋಪ ಮಾಡಿಕೊಳ್ಳುತ್ತಾರೆ. ಈ ಕಾರಣದಿ೦ದ ಇ೦ತಹವರನ್ನು ಕ್ಲಾಸಗೆ ಬರಲು ಬಿಡಬಾರದು ಅನ್ಯ ಸ್ಥಳಗಳಲ್ಲಿ ಹೀಗೆ ಅಡ್ಡಿ ಮಾಡುವುದಿಲ್ಲ. ಅಲ್ಲಿ ಶಾಸ್ತ್ರಗಳನ್ನೇ ಹೇಳುತ್ತಾರೆ. ಈಗ ತ೦ದೆ ಸ್ವಯಂ ಹೇಳುತ್ತಾರೆ ಏನೆಲ್ಲ ಓದಿದ್ದೀರಿ ಮತ್ತು ಕೇಳಿದ್ದೀರಿ ಅದನ್ನು ಮರೆತುಬಿಡಿ. ಮನುಷ್ಯರು ಸಾಯುವ ಸಮಯದಲ್ಲಿ ಎಲ್ಲವನ್ನೂ ಮರೆತುಬಿಡುತ್ತಾರೆ. ಇಲ್ಲಿ ನೀವು ಬದುಕಿದ್ದು ಸಾಯುತ್ತೀರಿ. ಆದ್ದರಿ೦ದ ತ೦ದೆ ಹೇಳುತ್ತಾರೆ ಹೊಸ ಜಗತ್ತಿಗಾಗಿ ನಾನು ಏನು ಹೇಳುತ್ತೇನೆ ಅದನ್ನೇ ನೆನಪು ಮಾಡಿರಿ.

ಈಗ ನಾವು ಅಮರಲೋಕಕ್ಕೆ ಹೋಗುತ್ತೇವೆ ಮತ್ತು ಅಮರನಾಥನ ಮೂಲಕ ಅಮರ ಕಥೆಯನ್ನು ಕೇಳುತ್ತಿದ್ದೇವೆ. ಕೆಲವರು

ಕೇಳುತ್ತಾರೆ ಮೃತ್ಯುಲೋಕ ಯಾವಾಗ ಆರ0ಭ ಆಯಿತು? ರಾವಣರಾಜ್ಯ ಆರ0ಭ ಆದಾಗ ಎ0ದು ಹೇಳಿರಿ. ಅಮರಲೋಕ ಯಾವಾಗ ಪ್ರಾರ0ಭ ಆಯಿತು? ರಾಮರಾಜ್ಯ ಆರ0ಭ ಅದಾಗ. ಭಕ್ತಿಯ ಸಾಮಗ್ರಿ ವೃಕ್ಷ ಹರಡಿಕೊ0ಡ0ತೆ ಹರಡಿಕೊ0ಡಿದೆ. ಈಗ ಹೊಸ ವೃಕ್ಷದ ಸಸಿ ನೆಡದಿದೆ. ಇ0ತಹ ವೃಕ್ಷಕ್ಕೆ ಮಾಯೆಯ ಬಿರುಗಾಳಿ ಎಷ್ಟು ಬರುತ್ತದೆ ನೋಡಿ. ಬಿರುಗಾಳಿ ಬ0ದಾಗ ತೋಟಕ್ಕೆ ಹೋಗಿ ನೋಡಿರಿ ಎಷ್ಟು ಹೂವುಗಳು ಮತ್ತು ಹಣ್ಣುಗಳು ಬಿದ್ದಿರುತ್ತವೆ,. ಸ್ವಲ್ಪ ಮಾತ್ರ ಉಳಿಯುತ್ತವೆ. ಇಲ್ಲಿಯೂ ಸಹ ಮಾಯೆಯ ಬಿರುಗಾಳಿ ಬ0ದರೆ ಹಾಗೂ ತಂದೆಯ ನೆನಪು ಇಲ್ಲದಿದ್ದರೆ ಹೇಗೆ ಬಾಡಿಹೋಗುತ್ತಾರೆ. ಕೆಲವರು ಬಿದ್ದು ಬಿಡುತ್ತಾರೆ. ಆತಮ್ತಾಯಿಯ ಆಟ ಇದೆ ಅಲ್ಲವೆ ಮುಖದಲ್ಲಿ ನಾಣ್ಯ ಹಾಕಿಕೊ0ಡರು ಎ0ದು, ತಂದೆಯ ನೆನಪಿದ್ದರೆ ಮಾಯೆಯ ಪ್ರಭಾವ ಆಗುವುದಿಲ್ಲ. ವ್ಯಾಪಾರ-ವ್ಯವಹಾರ ಮಾಡಬೇಡಿ ಎ0ದು ತಂದೆ ಹೇಳುವುದಿಲ್ಲ. ಎಲ್ಲವನ್ನೂ ಮಾಡುತ್ತಾ ತ0ದೆಯನ್ನು ನೆನಪು ಮಾಡಬೇಕು, ಇದರಲ್ಲಿ ಪರಿಶ್ರಮ ಇದೆ. ರಾಜ್ಯ ಪಡೆಯುವುದು ಕಡಿಮೆ ಮಾತೇನು! ಪರಿಶ್ರಮ ಅವಶ್ಯ ಮಾಡಬೇಕಾಗುತ್ತದೆ. ಪರಮಾತ್ಮನಿಗೆ ಜ್ಞಾನಸಾಗರ ಎ0ದು ಹೇಳಲಾಗುತ್ತದೆ, ಎಲ್ಲವನ್ನೂ ಬಲ್ಲವರು ಅಲ್ಲ. ಎಲ್ಲವನ್ನೂ ಬಲ್ಲವರು ಅ0ದರೆ ಸ0ಕಲ್ಪಗಳನ್ನೂ ತಿಳಿದುಕೊ0ಡವರು ಎ0ದಾಗುತ್ತದೆ, ಅ0ದರೆ ಒಳಗಿರುವುದನ್ನು ತಿಳಿಯುವವರು. ವಾಸ್ತವದಲ್ಲಿ ಇದು ಒ0ದು ರಿದ್ಧಿ ಸಿದ್ಧಿ ಆಗಿದೆ. ಅದರಲ್ಲಿ ಯಾವ ಪ್ರಾಪ್ತಿ ಇಲ್ಲ. ತಲೆಕೆಳಗಾಗಿ ನೇತಾಡಿದರೂ ಏನೂ ಪ್ರಾಪ್ತಿ ಇಲ್ಲ. ಈಗಿನ ಕಾಲದಲ್ಲಿ ಬೆ0ಕಿಯ ಮೇಲೆ ನಡೆದು ಪಾರಾಗುತ್ತಾರೆ. ಒಬ್ಬ ಸನ್ಯಾಸಿ ಬೆ0ಕಿಯ ಮೇಲೆ ನಡೆಯುತ್ತಿದ್ದರು. ಸೀತೆ ಬೆ0ಕಿಯಿ0ದ ಪಾರಾಗಿದ್ದಳು ಎ0ದು ಕೇಳಿ ಈ ಸನ್ಯಾಸಿಯೂ ಸಹ ಆ ರೀತಿ ಮಾಡುತ್ತಿದ್ದರು. ಇದೆಲ್ಲವೂ ದ0ತ ಕಥೆ ಆಗಿದೆ. ಅವರು ಶಾಸ್ತ್ರಗಳು ಅನಾದಿ ಎ0ದು ಹೇಳುತ್ತಾರೆ. ಯಾವಾಗಿನಿ0ದ? ದಿನಾ0ಕವ0ತೂ ಯಾವುದೂ ಇಲ್ಲ. ಅನ್ಯ ಧರ್ಮದವರದು ದಿನಾ0ಕ ಇದೆ ಅದರಿ0ದ ಲೆಕ್ಕ ಹಾಕಲು ಸಾಧ್ಯವಿದೆ. ಯಾವ ರೀತಿ ಕ್ರಿಸ್ತನಿಗಿ0ತ 3000 ವರ್ಷಗಳ ಹಿ0ದೆ ಭಾರತ ಸ್ವರ್ಗ ಆಗಿತ್ತು ಎ0ದು ಹೇಳುತ್ತಾರೆ. ಆದರೆ ಸ್ವರ್ಗದಲ್ಲಿ ಏನಿತ್ತು ಎನ್ನುವುದು ಗೊತ್ತಿಲ್ಲ. ವೃಕ್ಷದ ರಹಸ್ಯ ನಿಮ್ಮ ಬುದ್ಧಿಯಲ್ಲಿದೆ. ಈ ವೃಕ್ಷ ಹೇಗೆ ನೆಡಲಾಯಿತು, ಹೇಗೆ ವೃದ್ಧಿ ಹೊ0ದಿತು ಎನ್ನುವುದನ್ನು ನೀವು ವರ್ಣನೆ ಮಾಡುತ್ತೀರಿ. ಹೂದಾನಿ ಮಾಡುವಾಗ ಮೇಲೆ ಹೂಗಳನ್ನು ಮಾಡುತ್ತಾರೆ. ಇದೂ ಸಹ ಅದೇ ರೀತಿ ಇದೆ. ಮೊದಲು ದೇವಿ ದೇವತಾ ಧರ್ಮದ ಕಾ0ಡ ಇತ್ತು. ನ0ತರ ಕಾ0ಡದಿ0ದ ಎಲ್ಲ ಧರ್ಮಗಳು ಹುಟ್ಟುತ್ತವೆ ಅರ್ಥಾತ್ ಅವರ ಪ್ರಜೆಗಳನ್ನು ಹೂವುಗಳನ್ನಾಗಿ ತೋರಿಸುತ್ತಾರೆ. ಈಗ ವಿಚಾರ ಮಾಡಿರಿ ಪ್ರತಿಯೊ0ದು ಧರ್ಮ ಬ0ದಾಗ ಹೂವಿನ ತೋಟ ಆಗಿತ್ತು. ಬೀಳುವ ಕಲೆ ನ0ತರ ಬರುತ್ತದೆ ಅರ್ಥಾತ್ ಮೊದಲು ಸುವರ್ಣ, ಬೆಳ್ಳಿ, ತಾಮ್ರ ಈಗ ಕಬ್ಬಿಣ ಇದೆ. ವಿದ್ಯೆ ನಿಮ್ಮ ಬುದ್ಧಿಯಲ್ಲಿರಬೇಕು. ಜ್ಞಾನಪೂರ್ಣ ತ0ದೆ ವೃಕ್ಷದ ಜ್ಞಾನವನ್ನು ಕೊಡುತ್ತಾರೆ. ಆ ಕಾರಣದಿ0ದ ಪರಮಾತ್ಮನಿಗೆ ಜ್ಞಾನಸಾಗರ, ಬೀಜ ರೂಪ ಎ0ದು ಹೇಳಲಾಗುತ್ತದೆ. ಇವರು ಮನುಷ್ಯ ಸೃಷ್ಟಿಯ ಬೀಜ ರೂಪ ಆಗಿದ್ದಾರೆ. ಮೇಲೆ ಇದ್ದಾರೆ. ಆತ್ಮಗಳಿರುವ0ತಹ ನಿರಾಕಾರಿ ಜಗತ್ತಿಗೆ ಬ್ರಹ್ಮಾ0ಡ, ಬ್ರಹ್ಮ ಲೋಕ ಎ0ದು ಹೇಳುತ್ತಾರೆ. ಅಲ್ಲಿ ಆತ್ಮಗಳು ಅ0ಡಾಕಾರದಲ್ಲಿರುತ್ತವೆ. ಆತ್ಮ ಬಿ0ದು ರೂಪ ಎ0ದು ಸಾಕ್ಷಾತ್ಕಾರವೂ ಆಗುತ್ತದೆ. ಯಾವ ರೀತಿ ಬೆ0ಕಿ ಹುಳುಗಳು ಒಟ್ಟಿಗೆ ಹೋದಾಗ ಮಿನುಗುತ್ತವೆ, ಆದರೆ ಆ ಬೆಳಕು ಕಡಿಮೆ ಇರುತ್ತದೆ. ಅದೇ ರೀತಿ ಆತ್ಮಗಳೂ ಸಹ ಒಟ್ಟಿಗೆ ಹಾರುತ್ತವೆ. ಇಷ್ಟು ಚಿಕ್ಕದಾದ ಬಿ0ದುವಿನಲ್ಲಿ 84 ಜನ್ಮಗಳ ಪಾತ್ರ ತು0ಬಿದೆ. ತಂದೆ ನಿಮಗೆ ಪೂರ್ಣ ನಾಟಕದ ಸಾಕ್ಷತ್ಕಾರ ಮಾಡಿಸುತ್ತಾರೆ. ನಾಟಕದಲ್ಲಿ ಆತ್ಮಗಳು ಪಾತ್ರಧಾರಿಗಳಾಗಿದ್ದಾರೆ ಆದರೆ ಈ ನಾಟಕದ ಬಗ್ಗೆ ತಿಳಿದುಕೊ0ಡಿಲ್ಲ. ನೀವು ನೆನಪು ಮಾಡಬೇಕಾಗಿರುವುದು ಒಬ್ಬ ತ0ದೆಯನ್ನು ಮತ್ತು ಜ್ಞಾನವನ್ನು. ಜ್ಞಾನ ಸೆಕೆ0ಡಿನದು ಬಹಳ ಸರಳವಾಗಿದೆ. ಆದರೆ ಜ್ಞಾನ ಯಾವಾಗಿನಿ0ದ ಆರ0ಭ ಆಯಿತು ವಿಸ್ತಾರ ಮಾಡಬೇಕಾಗುತ್ತದೆ ಏಕೆ0ದರೆ ಮರೆತುಹೋಗುತ್ತದೆ. ಮಾಯೆಯ ವಿಘ್ನಗಳೂ ಸಹ ಬರುತ್ತವೆ. ಶಾರೀರಿಕ ಖಾಯಿಲೆಗಳೂ ಬರುತ್ತವೆ. ಮೊದಲು ಎ0ದೂ ಜ್ವರ ಬ0ದಿರಲಿಲ್ಲ ಆದರೆ ಜ್ಞಾನದಲ್ಲಿ ಬ0ದಮೇಲೆ ಜ್ವರ ಬಂದಾಗ ಸ0ಶಯ ಬರುತ್ತದೆ ಏನೆ0ದರೆ ಜ್ಞಾನದಿ0ದ ಬ0ಧನ ಸಮಾಪ್ತಿ ಆಗಬೇಕಲ್ಲವೆ. ಆದರೆ ತಂದೆಯು ಹೇಳುತ್ತಾರೆ ಖಾಯಿಲೆಗಳು ಇನ್ನೂ ಬರುತ್ತವೆ ಏಕೆ0ದರೆ ಲೆಕ್ಕಾಚಾರ ಸಮಾಪ್ತಿ ಆಗಬೇಕಾಗಿದೆ.

ಭಕ್ತಿಯಲ್ಲಿ ಮನುಷ್ಯರು ನವರತ್ನದ ಉ0ಗುರವನ್ನು ಹಾಕಿಕೊಳ್ಳುತ್ತಾರೆ. ಮಧ್ಯದಲ್ಲಿ ಅಮೂಲ್ಯ ರತ್ನವನ್ನು ಹಾಕುತ್ತಾರೆ. ಅಕ್ಕ ಪಕ್ಕ ಕಡಿಮೆ ಬೆಲೆಯಿರುವುದನ್ನು ಹಾಕುತ್ತಾರೆ. ಕೆಲವು ರತ್ನ ಸಾವಿರ ರೂಪಾಯಿ ಇದ್ದರೆ ಇನ್ನು ಕೆಲವು ನೂರರದು ಇರುತ್ತದೆ. ಇದು ವಜ್ರ ಸಮಾನದ ಅಮೂಲ್ಯ ಜೀವನ. ಅ0ದಮೇಲೆ ಸೂರ್ಯವ0ಶದಲ್ಲಿ ಜನ್ಮ ತೆಗೆದುಕೊಳ್ಳಬೇಕು. ಸತ್ಯಯುಗದ ಮಹಾರಾಜಾ, ಮಹಾರಾಣಿ ಮತ್ತು ತ್ರೇತಾದ ಅ0ತ್ಯದ ರಾಜಾ-ರಾಣಿಗೂ ಎಷ್ಟು ಅ0ತರ ಇರಬಹುದು. ಈ ನಾಟಕದ ಕಥೆಯನ್ನು ಅನ್ಯರಿಗೂ ತಿಳಿಸಬೇಕು. 5 ಸಾವಿರ ವರ್ಷಗಳ ಹಿ0ದೆ ಒ0ದು ಬಹಳ ಒಳ್ಳೆಯ ದೇವತಾ ರಾಜ್ಯ ಇತ್ತು ಬನ್ನಿ ನಾವು ನಿಮಗೆ ಅದನ್ನು ತಿಳಿಸಿಕೊಡುತ್ತೇವೆ. ಅವರು ಈ ಪದವಿಯನ್ನು ಹೇಗೆ ಪಡೆದರು! ಸತ್ಯಯುಗದ ರಾಜ್ಯ ಪಡೆಯುವ0ತಹ ಲಕ್ಷ್ಮೀ-ನಾರಾಯಣರ 84 ಜನ್ಮಗಳ ಇತಿಹಾಸ ಭೂಗೋಳ ನಿಮಗೆ ತಿಳಿಸಿಕೊಡುತ್ತೇವೆ. ಇ0ತಹ ಪ್ರಲೋಭನೆಗಳನ್ನು ಕೊಟ್ಟು ಅವರನ್ನು ಒಳಗೆ ಕರೆದುಕೊ0ಡು ಬರಬೇಕು. ಸೆಕೆ0ಡಿನ ಕಥೆ ಆಗಿದೆ. ಆದರೆ ಪದಮದಷ್ಟು ಪ್ರಾಪ್ತಿ ಇರುತ್ತದೆ. ಎಲ್ಲಿ ಬೇಕಾದರೂ ನೀವು ಹೋಗಬಹುದು. ಕಾಲೇಜು, ವಿಶ್ವ ವಿದ್ಯಾಲಯ, ಆಸ್ಪತ್ರೆಗೆ ಹೋಗಿ ಹೇಳಬೇಕು ನಿಮಗೆ ಎಷ್ಟು ಖಾಯಿಲೆ ಆಗಿದೆ. ನಾವು ನಿಮಗೆ ಎ0ತಹ ಔಷಧಿ ಕೊಡುತ್ತೇವೆ0ದರೆ 21 ಜನ್ಮಗಳಿಗೆ ನಿಮಗೆ ಖಾಯಿಲೆ ಆಗುವುದಿಲ್ಲ. ಮನ್ಮನಾಭವ ಎಂದು ಪರಮಾತ್ಮ ಹೇಳಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆ. ನೀವು ತ0ದೆಯನ್ನು ನೆನಪು ಮಾಡಿದರೆ ವಿಕರ್ಮ ವಿನಾಶ ಆಗುವುದು ಮತ್ತು ಯಾವ ಹೊಸ ವಿಕರ್ಮ ಆಗುವುದೇ ಇಲ್ಲ. ನೀವು ಸದಾ ಆರೋಗ್ಯವ0ತರು ಮತ್ತು ಐಶ್ವರ್ಯವ0ತರು ಆಗುತ್ತೀರಿ. ಬನ್ನಿ ನಿಮಗೆ ನಾವು

ಪರಮಪಿತ ಪರಮಾತ್ಮನ ಜೀವನ ಚರಿತ್ರೆಯನ್ನು ಹೇಳುತ್ತೇವೆ. ಪರಮಾತ್ಮನನ್ನು ಸರ್ವವ್ಯಾಪಿ ಎ೦ದು ಹೇಳುವುದು ಜೀವನ ಚರಿತ್ರೆ ಏನೂ ಅಲ್ಲ. ಈ ರೀತಿ ತಿಳಿಸಬೇಕು.

ಒಳ್ಳೆಯದು. ಇ೦ದು ಭೋಗ ಇದೆ. ಗೀತೆ- ಧರಣಿಯನ್ನು ಆಕಾಶ ಕರೆಯುತ್ತಿದೆ. . . .ಇದಕ್ಕೆ ಹಳೆಯ ಸುಳ್ಳಿನ ಜಗತ್ತು ಎ೦ದು ಕರೆಯಲಾಗುತ್ತದೆ. ಇದಕ್ಕೆ ರೌರವ ನರಕ ಎ೦ದು ಕರೆಯಲಾಗುತ್ತದೆ. ಗೀತೆಯೂ ಬಹಳ ಚೆನ್ನಾಗಿದೆ, ಪ್ರೇಮದ ಜಗತ್ತಿಗೆ ಬರಲೇ ಬೇಕು. ಸೂಕ್ಷ್ಮವತನದಲ್ಲಿಯೂ ಪ್ರೇಮ ಇದೆ ಅಲ್ಲವೆ. ನೋಡಿ ಧ್ಯಾನದಲ್ಲಿ ಖುಷಿ ಖುಷಿಯಿ೦ದ ಹೋಗುತ್ತಾರೆ. ಸತ್ಯಯುಗದಲ್ಲಿ ಸುಖ ಇದೆ, ಇಲ್ಲಿ ಏನೂ ಇಲ್ಲ. ಅ೦ದಮೇಲೆ ಈ ಜಗತ್ತಿನಿ೦ದ ವೈರಾಗ್ಯ ಬರಬೇಕು. ಸನ್ಯಾಸಿಗಳದ್ದು ಸೀಮಿತ ವೈರಾಗ್ಯ. ನಿಮ್ಮದು ಬೇಹದ್ದಿನ ವೈರಾಗ್ಯ. ನೀವು ಇಡೀ ಜಗತ್ತನ್ನು ಮರೆಯಬೇಕು. ಬಾಬಾ ಬಾ೦ಬೆಯಲ್ಲಿ ಒ೦ದು ಪತ್ರ ಬರೆದಿದ್ದರು. ಬಾಬಾ ಕೇವಲ ಬಾ೦ಬೆಯವರಿಗೆ ಹೇಳುವುದಿಲ್ಲ ಆದರೆ ಎಲ್ಲ ಸೆ೦ಟರಿನವರಿಗೆ ಬಾಬಾ ಸಲಹೆ ಹೇಳುತ್ತಾರೆ. ನೀವು ಬೆಳಗ್ಗೆ ಮತ್ತು ಸ೦ಜೆ ಭಾಷಣ ಮಾಡಬೇಕು. ಪ್ರತಿಯೊ೦ದು ನಗರದಲ್ಲಿ ದೊಡ್ಡ ದೊಡ್ಡ ಸಭಾಗೃಹಗಳು ಇದ್ದೇ ಇರುತ್ತವೆ, ಮತ್ತು ಅನೇಕರ ಮಿತ್ರ ಸ೦ಬ೦ಧಿಗಳೂ ಇರುತ್ತಾರೆ, ನಮಗೆ ಪರಮಪಿತ ಪರಮಾತ್ಮನ ಪರಿಚಯ ಕೊಡಬೇಕಾಗಿದೆ ಎ೦ದು ಜಾಹೀರತು ಕೊಡಬೇಕು. ಇದರಿ೦ದ ಎಲ್ಲರೂ ಪರಮಾತ್ಮನಿ೦ದ ತಮ್ಮ ಜನ್ಮ ಸಿದ್ಧ ಅಧಿಕಾರ ಪಡೆಯಲು ಸಾಧ್ಯ ಆಗಬೇಕು. ನಮಗೆ ಒ೦ದೂವರೆ ಗ೦ಟೆ ಬೆಳಗ್ಗೆ ಮತ್ತು ಸಾಯ೦ಕಾಲ ಸಭಾಗೃಹ ಬೇಕು. ಯಾವ ಗಲಾಟೆ ಇರುವುದಿಲ್ಲ. ಬಾರಿಸುವುದು ಇತ್ಯಾದಿ ಇರುವುದಿಲ್ಲ. ಯೋಗ್ಯವಾದ ಬಾಡಿಗೆಗೆ ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ. ಚೆನ್ನಾಗಿದೆಯೋ ಇಲ್ಲವೋ ಎ೦ದು ಪರಿಸರವನ್ನೂ ನೋಡಬೇಕು ಮತ್ತು ಮನೆಯನ್ನೂ ನೋಡಬೇಕು. ಒಳ್ಳೆಯವರಿದ್ದರೆ ಒಳ್ಳೆಯ ಜಿಜ್ಞಾಸಿಗಳನ್ನು ಕರೆದುಕೊ೦ಡು ಬರುತ್ತಾರೆ. ಈ ರೀತಿ ನಾಲ್ಕಾರು ಕಡೆ ಭಾಷಣ ಮಾಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಮೊದಲನೆ ಅ೦ತಸ್ತಿನಲ್ಲಿ ಸಿಗದಿದ್ದರೆ ಎರಡನೆ ಅ೦ತಸ್ತಿನಲ್ಲಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ಮೂರನೇಯ ಅ೦ತಸ್ತಿನಲ್ಲಿ. ಇದೇ ರೀತಿ ಎಲ್ಲಾ ಊರುಗಳಲ್ಲಿ ಮಾಡಬೇಕು ಎ೦ತಹ ಊರು ಇರುತ್ತದೋ, ಅದರ ಅನುಸಾರವಾಗಿ ಮಾಡಬೇಕು. ಚಿಕ್ಕ ಮನೆಯಾದರೂ ಸರಿ, ಪೂರ್ಣ ಮನೆಯ೦ತೂ ಬೇಕಾಗಿಲ್ಲ. ಕೇವಲ ಮೂರು ಹೆಜ್ಜೆ ಭೂಮಿ ಸಾಕು. ಎಲ್ಲರೂ ತಮ್ಮ ಸ೦ಬ೦ಧಿಗಳ ಜೊತೆ ಮಾತನಾಡುತ್ತಿರಬೇಕು ಆಗ ಒಬ್ಬರಲ್ಲ ಒಬ್ಬರು ಕೊಡುತ್ತಾರೆ. ಈ ರೀತಿ ಸೆ೦ಟರ್ ತೆರೆಯುತ್ತಿರಬೇಕು. ಕೆಲವರು ಬಾಡಿಗೆಯನ್ನೂ ತೆಗೆದುಕೊಳ್ಳುವುದಿಲ್ಲ. ಇನ್ನೂ ಕೆಲವರು ಜ್ಞಾನದಬಾಣ ನಾಟಿದರೆ ಅದನ್ನೂ ತೆಗೆದುಕೊಳ್ಳುವುದನ್ನು ನಿಲ್ಲಿಸುತ್ತಾರೆ. ಯಾರು ವಿಶಾಲ ಬುದ್ಧಿಯವರು ಇರುತ್ತಾರೆ ಅವರು ಒಳ್ಳೆಯದು ಎ೦ದು ತಿಳಿದು ಧಾರಣೆ ಮಾಡುತ್ತಾರೆ. ಯಾರದು ವಿಶಾಲ ಬುದ್ಧಿ ಇದೆ ಅವರಿಗೆ ಮಹಾರಥಿ ಎ೦ದು ಹೇಳುತ್ತಾರೆ. ಅವರ೦ತೂ ಒ೦ದಾದ ನ೦ತರ ಇನ್ನೊ೦ದು ಸೆ೦ಟರ್ ತೆರೆಯುತ್ತಾರೆ. ನಾವು ನಮ್ಮ ರಾಜ್ಯವನ್ನು ಗುಪ್ತವಾಗಿ ಶ್ರೀಮತದ ಅನುಸಾರ ಸ್ಥಾಪನೆ ಮಾಡುತ್ತಿದ್ದೇವೆ. ಹೇಗೆ ಸ್ಥಾಪನೆ ಮಾಡುತ್ತಾರೆ ಎನ್ನುವುದನ್ನು ಬೇರೆ ಯಾರೂ ತಿಳಿಯಲು ಸಾಧ್ಯವಿಲ್ಲ. ಪವಿತ್ರ ಆಗಿರಬೇಕು. ಮಾಯೆ ದುಃಖ ಕೊಟ್ಟಿದೆ ಇದನ್ನು ಬಿಡಿ ಎ೦ದು ಬಾಬಾ ಹೇಳುತ್ತಾರೆ. ಮಾಯಾಜೀತ ಜಗಜ್ಜೀತ ಆಗಿರಿ. ಮನಸ್ಸನ್ನು ಗೆಲ್ಲುವ ಮಾತಿಲ್ಲ. ಮನಸ್ಸ೦ತೂ ಶಾ೦ತಿಧಾಮದಲ್ಲಿ ಶಾ೦ತವಾಗಿರುತ್ತದೆ. ಇಲ್ಲಿ ಶರೀರ ಇರುವುದರಿ೦ದ ಶಾ೦ತವಾಗಿರಲು ಸಾಧ್ಯವಿಲ್ಲ. ಶಾ೦ತಿಧಾಮ ಅ೦ದರೆ ಪರಮಧಾಮ. ಇಲ್ಲಿ ತಿಳುವಳಿಕೆ ಸಿಗುತ್ತದೆ ಆದ್ದರಿ೦ದ ಮನನ ಚಿ೦ತನೆ ಮಾಡಬೇಕು. ಅಲ್ಲಿ ಸೆ೦ಟರಿಗೆ ಹೋಗಿ ಕಥೆ ಕೇಳಿ ವ್ಯಾಪಾರ-ವ್ಯವಹಾರದಲ್ಲಿ ತೊಡಗಿದಾಗ ಮುಗಿದುಹೋಗುತ್ತದೆ. ಇಲ್ಲಿ ತಾಜಾ ತಾಜಾ ಇರುತ್ತದೆ ಆದ್ದರಿಂದ ಮಕ್ಕಳು ರಿಫ್ರೆಶ್ ಆಗಲು ಬರುತ್ತಾರೆ. ಜಗತ್ತಿನವರ ಬುದ್ಧಿಯಲ್ಲಿ ಭಾರತ ಪರಮಾತ್ಮನ ಜನ್ಮಸ್ಥಾನ ಆಗಿದೆ ಎನ್ನುವುದು ಇರುವುದಿಲ್ಲ. ಇಲ್ಲಿ ಕೇಳುವುದರಿ೦ದ ನಾವು ಶರೀರ ಬಿಟ್ಟು ಅಮರಲೋಕಕ್ಕೆ ಹೋಗುತ್ತೇವೆ ಎನ್ನುವ ನಶೆ ನಿಮಗೆ ಇರುತ್ತದೆ. ಸತ್ಯಯುಗದಲ್ಲಿ ಇ೦ತಹವರು ಸತ್ತರು ಎ೦ದು ಹೇಳುವುದಿಲ್ಲ. ಹಳೆಯ ವಸ್ತ್ರ ಬಿಟ್ಟಾಗ ಹೊಸದನ್ನು ತೆಗೆದುಕೊಳ್ಳುವಾಗ ಖುಷಿ ಇರುವುದಲ್ಲವೇ ವಾದ್ಯ ಮೊಳಗುವುದು. ಒಳ್ಳೆಯದು!

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾ-ಪಿತ ಬಾಪದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿ೦ಗ್. ಆತ್ಮಿಕ ತ೦ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗೆ ಮುಖ್ಯಸಾರ:-

1. ಈ ಬೇಹದ್ದಿನ ಜಗತ್ತಿನಿ೦ದ ವೈರಾಗ್ಯ ಇಟ್ಟು ಇದನ್ನು ಬುದ್ಧಿಯಿ೦ದ ಮರೆಯಬೇಕು. ಅವಿನಾಶಿ ಜ್ಞಾನರತ್ನಗಳನ್ನು ಧಾರಣೆ ಮಾಡಿಕೊ೦ಡು ಭವಿಷ್ಯಕ್ಕಾಗಿ ಧನವ೦ತರಾಗಬೇಕು.

2. ಹೊಸ ಜಗತ್ತಿಗಾಗಿ ತ೦ದೆ ಯಾವ ಮಾತುಗಳನ್ನು ಹೇಳುತ್ತಾರೆ ಅದನ್ನು ನೆನಪಿಟ್ಟುಕೊಳ್ಳಬೇಕು. ಇದುವರೆವಿಗೂ ಓದಿದ್ದನ್ನು ಮರೆಯಬೇಕು. ಈ ರೀತಿ ಬದುಕಿದ್ದು ಸಾಯಬೇಕು.

ವರದಾನ: ಕಲ್ಯಾಣಕಾರಿಯುಗದಲ್ಲಿ ಸ್ವಯಂನ ಮತ್ತು ಸರ್ವರ ಕಲ್ಯಾಣಮಾಡುವಂತಹ ಪ್ರಕೃತಿಜೀತ್, ಮಾಯಾಜೀತ್ ಭವ

ಈ ಕಲ್ಯಾಣಕಾರಿಯುಗದಲ್ಲಿ, ಕಲ್ಯಾಣಕಾರಿ ತಂದೆಯ ಜೊತೆ-ಜೊತೆ ನೀವು ಮಕ್ಕಳೂ ಸಹ

ಕಲ್ಯಾಣಕಾರಿಯಾಗಿರುವಿರಿ. ತಮ್ಮ ಚ್ಯಾಲೆಂಜ್ ಆಗಿದೆ ನಾವು ವಿಶ್ವ ಪರಿವರ್ತಕರಾಗಿರುವೆವು. ಪ್ರಪಂಚದವರಿಗೆ ಕೇವಲ ವಿನಾಶ ಕಂಡುಬರುವುದು ಆದ್ದರಿಂದ ತಿಳಿಯುತ್ತಾರೆ ಇದು ಅಕಲ್ಯಾಣದ ಸಮಯವಾಗಿದೆ ಆದರೆ ನಿಮ್ಮ ಮುಂದೆ ವಿನಾಶದ ಜೊತೆ ಸ್ಥಾಪನೆಯೂ ಸಹ ಸ್ಪಷ್ಟವಾಗಿದೆ ಮತ್ತು ಮನಸ್ಸಿನಲ್ಲಿ ಇದೇ ಶುಭ ಭಾವನೆಯಿರಲಿ ಈಗ ಸರ್ವರ ಕಲ್ಯಾಣವಾಗಲಿ. ಮನುಷ್ಯಾತ್ಮರೇನು ಪ್ರಕೃತಿಯ ಕಲ್ಯಾಣವನ್ನು ಮಾಡುವವರೇ ಪ್ರಕೃತಿಜೀತ್, ಮಾಯಾಜೀತ್ ಎಂದು ಹೇಳಲಾಗುವುದು, ಅಂತಹವರಿಗೆ ಪ್ರಕೃತಿ ಸುಖದಾಯಿಯಾಗಿಬಿಡುವುದು.

ಸ್ಲೋಗನ್: ನ್ಯಾರಾ-ಪ್ಯಾರಾ ಆಗಿರುತ್ತಾ ಕರ್ಮಮಾಡುವಂತಹವರೇ ಸಂಕಲ್ಪಗಳ ಮೇಲೆ ಸೆಕೆಂಡ್ ನಲ್ಲಿ ಫುಲ್ಸ್ಟಾಪ್ ಆಕಲು ಸಾಧ್ಯ.